ಅ. ನಂ.	ಶೀರ್ಷಿಕೆ	ಧಾರವಾಡ	ಹುಬ್ಬಳ್ಳಿ	ಕಲಘಟಗಿ	ಕುಂದಗೋಳ	ನವಲಗುಂದ
1	ಮನೆಹಾನಿ	280.36	222.32	69.11	198.70	330.91
2	ಪಾತ್ರೆ ಬಟ್ಟೆ ಇತ್ಯಾದಿ	97.82	3.60	34.22	0.10	222.62
3	ಬೆಳೆ ಹಾನಿ	504.97	533.32	353.82	586.51	1122.26
4	ಮಾನವ ಜೀವಹಾನಿ	3.00	1.00	2.00	0.00	1.00
5	ಜಾನುವಾರು ಜೀವಹಾನಿ	0.10	0.41	0.37	0.08	1.89

665 ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಜವಳಿ, ಯುವಜನ ಸೇವೆಗಳು ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು ; ಇವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಇವುಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು;

ಆ) ಕರ್ನಾಟಕದಲ್ಲಿ ಹತ್ತಿ ಗಿರಣಿಗಳು ಪ್ರತಿ ಯುನಿಟ್ ವಿದ್ಯುತ್‌ಗೆ 4.50 ರೂ. ಪಾವತಿಸಬೇಕಾಗಿರುವುದರಿಂದ ಇವುಗಳು ಮುಚ್ಚುವ ಹಂತ ತಲುಪಿರುವುದು ನಿಜವಲ್ಲವೇ ;

ಇ) ಮಹಾರಾಷ್ಟ್ರದಲ್ಲಿ ಪ್ರತಿ ಯುನಿಟ್‌ಗೆ 2.50 ರೂ. ಇದ್ದು, ರಾಜ್ಯದಲ್ಲೂ ವಿದ್ಯುತ್ ದರ ಕಡಿತಗೊಳಿಸಲು ಸರ್ಕಾರ ಆದೇಶಿಸುತ್ತದೆಯೇ;

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಜವಳಿ, ಯುವಜನ ಸೇವೆಗಳು ಮತ್ತು ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹತ್ತಿ ಗಿರಣಿಗಳ ಸಂಖ್ಯೆ – 39

ಇವುಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲಾವಾರು ವಿವರ ಇಂತಿದೆ.

ಬೆಂಗಳೂರು (ನ) ಜಿಲ್ಲೆ	5	ಧಾರವಾಡ ಜಿಲ್ಲೆ	7
ರಾಮನಗರ ಜಿಲ್ಲೆ	1	ಮೈಸೂರು ಜಿಲ್ಲೆ	6
ಬಳ್ಳಾರಿ ಜಿಲ್ಲೆ	1	ಚಾಮರಾಜನಗರ ಜಿಲ್ಲೆ	1
ಬೆಳಗಾವಿ ಜಿಲ್ಲೆ	3	ರಾಯಚೂರು ಜಿಲ್ಲೆ	2
ಬಿಜಾಪುರ ಜಿಲ್ಲೆ	1	ಬಾಗಲಕೋಟೆ ಜಿಲ್ಲೆ	1
ಚಿತ್ರದುರ್ಗ ಜಿಲ್ಲೆ	4	ಗದಗ್ ಜಿಲ್ಲೆ	3
ದಾವಣಗೆರೆ ಜಿಲ್ಲೆ	2	ಹಾವೇರೀ ಜಿಲ್ಲೆ	2

ಇವುಗಳಲ್ಲಿರುವ ನೌಕರರ ಸಂಖ್ಯೆ – 16797

ಆ) ಕರ್ನಾಟಕದಲ್ಲಿ ಪ್ರತಿ ಯುನಿಟ್ ವಿದ್ಯುತ್‌ಗೆ ವಿಧಿಸುತ್ತಿರುವ ವಿದ್ಯುತ್ ದರಗಳು ಇಂತಿವೆ.

100000 ಯುನಿಟ್‌ವರೆಗೆ ರೂ.3.80

100000 ಯುನಿಟ್‌ಗೆ ಮೀರಿದ ವಿದ್ಯುತ್‌ಗೆ ರೂ.4.30

ಆದುದರಿಂದ ರಾಜ್ಯದಲ್ಲಿ ಪ್ರತಿ ಯೂನಿಟ್‌ಗೆ ರೂ.4.50 ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ವಿದ್ಯುತ್ ಬಿಲ್ ಪಾವತಿಯ ಹೊರೆಯಿಂದಾಗಿ ಹತ್ತಿ ಗಿರಣಿ ಮುಚ್ಚುವ ಹಂತ ತಲುಪಿರುವ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ರಾಜ್ಯದಲ್ಲಿ ವಿದ್ಯುತ್ ದರ ಕಡಿತಗೊಳಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

708 ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) : ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕು, ಡಾ: ನಂಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕೆಂದು ಘೋಷಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?